**ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಕೆಎಸ್‌ಆರ್‌ಪಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 25-9-2009 ರಂದು ನಡೆದ ಟೆಂಡರ್‌ದಾರರ ಪೂರ್ವಭಾವಿ ಸಭೆಯ ನಡವಳಿಗಳು.**

ವಿಷಯ: ದಿನಾಂಕ: 25-9-2009 ರಂದು 3ನೇ ಪಡೆ, ಕೆಎಸ್‌ಆರ್‌ಪಿ ಆವರಣದಲ್ಲಿ ಕಮಾಂಡೆಂಟ್ ಮತ್ತು ಸಹಾಯಕ ಕಮಾಂಡೆಂಟ್‌ರವರುಗಳ ವಸತಿ ಗೃಹಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಟೆಂಡರ್‌ದಾರರ ಪೂರ್ವಭಾವಿ ಸಭೆ ಕುರಿತು.

* * *

**ಹಾಜರಿದ್ದ ಸದಸ್ಯರು:**

1) ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು
2) ಮೆ: ಬಿಲ್ಡೋ-ಕ್ರಾಫ್ಟ್, ಆರ್ಕಿಟೆಕ್ಟ್ಸ್ ಅಂಡ್ ಇಂಜಿನಿಯರ್ ಸಂಸ್ಥೆಯ ಪ್ರತಿನಿಧಿ.
3) ಶ್ರೀ ಬೋರೇಗೌಡ, ನಿವೃತ್ತ ಮುಖ್ಯ ಅಭಿಯಂತರರು, ಪಿಡಬ್ಲ್ಯೂಡಿ, ಕರ್ನಾಟಕ ಸರ್ಕಾರ

**ಪೀಠಿಕೆ:**

ದಿನಾಂಕ: 10-9-2009 ಮತ್ತು 11-9-2009 ರಂದು ಈ ಕೆಳಕಂಡ ದಿನಪತ್ರಿಕೆಗಳಲ್ಲಿ ಟೆಂಡರ್ ಅಧಿಸೂಚನೆ ಮತ್ತು ತಿದ್ದುಪಡಿಗಳನ್ನು ಹಾಗೂ ಪೋಲೀಸ್ ವೆಬ್‌ಸೈಟ್ ಮತ್ತು ಸಂಬಂಧಪಟ್ಟ ಟೆಂಡರ್ ಬುಲೆಟಿನ್ ಅಧಿಕಾರಿಗಳಿಗೆ ಕೋರಮಂಗಲ 3ನೇ ಪಡೆ, ಕೆಎಸ್‌ಆರ್‌ಪಿ ಆವರಣದಲ್ಲಿ 4 ಸಂಖ್ಯೆ ಕಮಾಂಡೆಂಟ್ ಮತ್ತು 4 ಸಂಖ್ಯೆ ಸಹಾಯಕ ಕಮಾಂಡೆಂಟ್‌ರವರುಗಳ ವಸತಿ ಗೃಹಗಳ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಕಟಣೆಗೆ ಸ್ಪಂಧಿಸಿ ಈ ಕೆಳಕಂಡ ಬಿಡ್‌ದಾರರು ಸಂಪೂರ್ಣ ಟೆಂಡರ್ ಫಾರಂಗಳನ್ನು ದ್ವಿಪ್ರತಿಗಳಲ್ಲಿ ಪಡೆದುಕೊಂಡಿರುತ್ತಾರೆ.

**ಪತ್ರಿಕೆ ವಿವರ**

1) ಪ್ರಜಾವಾಣಿ, ಬೆಂಗಳೂರು
2) ವಿಜಯ ಕರ್ನಾಟಕ, ಬೆಂಗಳೂರು
3) ಡೆಕ್ಕನ್ ಹೆರಾಲ್ಡ್, ಬೆಂಗಳೂರು
4) ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು

**ಟೆಂಡರ್ ಅರ್ಜಿ ಫಾರಂ ಪಡೆದವರ ವಿವರ:-**

1) ಮೆ: ಸಾಯಿ ಪ್ರಭು ಕನ್ಸ್‌ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು
2) ಮೆ: ವೆನ್‌ಸರ್ ಕನ್ಸ್‌ಟ್ರಕ್ಷನ್ಸ್ ಕಂಪನಿ ಲಿಮಿಟೆಡ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು
3) ಶ್ರೀ ಎಲ್.ದಯಾನಂದ್, ಇಂಜಿನಿಯರಿಂಗ್ ಕಂಟ್ರ್ಯಾಕ್ಟ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು
4) ಮೆ: ವೀರಸ್ವಾಮಿ ರೆಡ್ಡಿ ಅಂಡ್ ಸನ್ಸ್, ಇಂಜಿನಿಯರ್ಸ್ ಅಂಡ್ ಕಂಟ್ರ್ಯಾಕ್ಟರ್ಸ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು.
5) ಮೆ: ಅಕ್ಷ ಸಿವಿಲ್ ಇಂಜಿನಿಯರಿಂಗ್ ಅಂಡ್ ಕಂಟ್ರ್ಯಾಕ್ಟರ್ಸ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು.
6) ಶ್ರೀ ಎಂ.ಕೃಷ್ಣಮೂರ್ತಿ, ಶ್ರೀ ಬಾಲಾಜಿ ಕನ್ಸ್‌ಟ್ರಕ್ಷನ್ಸ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು

ಮೇಲ್ಕಂಡ 6 ಸಂಸ್ಥೆಗಳಲ್ಲಿ ಈ ಕೆಳಕಂಡ 3 ಸಂಸ್ಥೆಗಳು ಮಾತ್ರ ಟೆಂಡರ್‌ದಾರರ ಪೂರ್ವಭಾವಿ ಸಭೆಗೆ ಹಾಜರಾಗಿರುತ್ತಾರೆ.

1) ಶ್ರೀ ಎಲ್.ದಯಾನಂದ್, ಇಂಜಿನಿಯರಿಂಗ್ ಕಂಟ್ರ್ಯಾಕ್ಟ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು
2) ಮೆ: ವೀರಸ್ವಾಮಿ ರೆಡ್ಡಿ ಅಂಡ್ ಸನ್ಸ್, ಇಂಜಿನಿಯರ್ಸ್ ಅಂಡ್ ಕಂಟ್ರ್ಯಾಕ್ಟರ್ಸ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು.
3) ಮೆ: ಅಕ್ಷ ಸಿವಿಲ್ ಇಂಜಿನಿಯರಿಂಗ್ ಅಂಡ್ ಕಂಟ್ರ್ಯಾಕ್ಟರ್ಸ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು.

ಡಿಐಜಿಪಿ ಮತ್ತು ಟೆಂಡರ್ ಪರಿಶೀಲನಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಭೆಯನ್ನುದ್ದೇಶಿಸಿ ಪ್ರಾಸ್ತವಿಕವಾಗಿ ಮಾತನಾಡಿ, ಪೊಲೀಸ್ ಇಲಾಖೆಯ ಕಟ್ಟಡ ಕಾಮಗಾರಿಗಳನ್ನು ನಿರ್ಮಾಣ ಮಾಡಲು ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ಸಂಸ್ಥೆ, ಬೆಂಗಳೂರು ಸಂಸ್ಥೆ ಇರುತ್ತದೆ. ಸದರಿ ಸಂಸ್ಥೆಯು ಪೊಲೀಸ್ ಇಲಾಖೆಯ ಎಲ್ಲಾ ಕಟ್ಟಡ ಕಾಮಗಾರಿಗಳನ್ನು ನಿರ್ವಹಿಸುತ್ತಿದೆ. ಅಲ್ಲಿ ನುರಿತ ತಾಂತ್ರಿಕ ತಜ್ಞರು ಮತ್ತು ಟೆಂಡರ್ ದಾಖಲೆಗಳನ್ನು ತಯಾರಿಸಲು ನುರಿತ ಅಧಿಕಾರಿಗಳಿರುತ್ತಾರೆ. ಆದರೆ, ಅನಿವಾರ್ಯವಾಗಿ ಈ ಕಛೇರಿಯಿಂದ ಮೇಲ್ಕಂಡ ಕಾಮಗಾರಿಗೆ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್ ದಾಖಲೆಗಳಲ್ಲಿ ತಾಂತ್ರಿಕ ತಪ್ಪುಗಳಿದ್ದಲ್ಲಿ ಅಥವಾ ತಮಗೆ ಹೆಚ್ಚಿನ ಮಾಹಿತಿ/ವಿವರಗಳ ಅಗತ್ಯವಿದ್ದಲ್ಲಿ ಸಂಸ್ಥೆಯ ಪ್ರತಿನಿಧಿಗಳಿಗೆ ತಿಳಿಸಲಾಯಿತು ಮತ್ತು ಟೆಂಡರ್ ಪ್ರಕ್ರಿಯೆಯು ಸಂಪೂರ್ಣವಾಗಿ ಪಾರದರ್ಶಕ ಮತ್ತು ನಿಷ್ಪಕ್ಷವಾಗಿ ಕಾರ್ಯ ನಿರ್ವಹಿಸುವುದು. ಈ ಬಗ್ಗೆ ಯಾವುದೇ ಅನುಮಾನಕ್ಕೆ ಆಸ್ಪದವಿಲ್ಲವೆಂದೂ ಸಹ ತಿಳಿಸಿದರು.

(1) ಸಭೆಯಲ್ಲಿ ಭಾಗವಹಿಸಿದ್ದ ಮೆ: ಅಕ್ಷ ಸಿವಿಲ್ ಇಂಜಿನಿಯರಿಂಗ್ ಅಂಡ್ ಕಂಟ್ರ್ಯಾಕ್ಟರ್ಸ್, ಕ್ಲಾಸ್-1 ಕಂಟ್ರ್ಯಾಕ್ಟರ್, ಬೆಂಗಳೂರು ಸಂಸ್ಥೆಯ ಪ್ರತಿನಿಧಿಯು ಟೆಂಡರ್ ಅಧಿಸೂಚನೆಯಲ್ಲಿ ಸದರಿ ಕಾಮಗಾರಿಗೆ ನಿಗದಿಪಡಿಸಿರುವ ಸಮಯವು ಅತ್ಯಂತ ಕಡಿಮೆ ಅವಧಿಯಾಗಿರುತ್ತದೆ. ಈ ಅವಧಿಯಲ್ಲೇ ನಿರ್ಮಾಣ ಮಾಡಿದರೆ ಕಾಮಗಾರಿಯ ಗುಣಮಟ್ಟವು ಈ ಕೆಳಕಂಡ ಕಾರಣಗಳಿಂದ ಕಳಪೆಯಾಗುವುದೆಂದು ತಿಳಿಸಿರುತ್ತಾರೆ.

ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರತಿ ಹಂತದಲ್ಲಿಯೂ ಮಾಡಬೇಕಾದ ಕ್ಯೂರಿಂಗ್‌ಗಾಗಿ ನಿರ್ದಿಷ್ಟ ಅವಧಿಯಲ್ಲಿ ಕ್ಯೂರಿಂಗ್ ಮಾಡಬೇಕಾಗಿರುತ್ತದೆ ಮತ್ತು ಪ್ಲಾಸ್ಟಿಂಗ್ ಆದ ಕೂಡಲೇ ಪೈಂಟಿಂಗ್ ಮಾಡಿದರೆ ಪೈಂಟಿಂಗ್ ಗುಣಮಟ್ಟ ಕಳಪೆಯಾಗುತ್ತದೆಂದು ತಿಳಿಸಿದರು. ಇದಕ್ಕೆ ಇತರೆ ಬಿಡ್‌ದಾರರೂ ಸಹ ಸಹಮತಿ ವ್ಯಕ್ತಪಡಿಸಿದರು. ಹಾಗೂ 5 ತಿಂಗಳ

ಅವಧಿಗೆ ಸೀಮಿತಗೊಳಿಸಿ ದಂಡ ವಿಧಿಸಿದರೆ ತುಂಬಾ ತೊಂದರೆಯಾಗುವುದೆಂದು, ಆದುದರಿಂದ, ಒಂದು ತಿಂಗಳ ಹೆಚ್ಚುವರಿ ಕಾಲಾವಧಿಯನ್ನು ವಿಸ್ತರಿಸುವಂತೆ ಕೋರಿದರು.

ಇದಕ್ಕೆ ಡಿ.ಐ.ಜಿ.ಪಿ., ಕೆ.ಎಸ್.ಆರ್.ಪಿ., ಮತ್ತು ಟೆಂಡರ್ ಪರಿಶೀಲನಾ ಕಾರ್ಯಾದ್ಯಕ್ಷಕರು ಮಾತನಾಡಿ, 12ನೇ ಹಣಕಾಸು ಆಯೋಗದಡಿ ಈ ಯೋಜನೆಗೆ ನಿಗದಿಪಡಿಸಿದ ಅನುದಾನವನ್ನು 2010 ಫೆಬ್ರವರಿಯೊಳಗೆ ಉಪಯೋಗಿಸಿಕೊಳ್ಳಲೇ ಬೇಕಾಗಿರುವುದರಿಂದಲೂ, ಲಭ್ಯವಿರುವ ಅನುದಾನಕ್ಕೇ ಸೀಮಿತವಾಗಿ ಕಾಮಗಾರಿ ಕೈಗೆತ್ತಿಕೊಳ್ಳುವುದರಿಂದಲೂ 5 ತಿಂಗಳ ಕಾಲಾವಕಾಶವು ಸಮರ್ಪಕವಾಗಿರುವುದರಿಂದಲೂ ಅದನ್ನು ವಿಸ್ತರಿಸುವುದು ಅವಶ್ಯಕವಿಲ್ಲವೆಂದು ತಿಳಿಸಿದರು, ಇದಕ್ಕೆ ಟೆಂಡರದಾರರು ತಮ್ಮ ಸಮ್ಮತಿ ವ್ಯಕ್ತಪಡಿಸಿದರು.

2. ಮೆ: ವೀರಸ್ವಾಮಿ ರೆಡ್ಡಿ ಅಂಡ್ ಸನ್ಸ್, ಬೆಂಗಳೂರು ಸಂಸ್ಥೆಯ ಪ್ರತಿನಿಧಿಯು ಮಾತನಾಡಿ, ಟೆಂಡರ್ ದಾಖಲೆಯ ಶೆಡ್ಯೂಲ್-ಬಿ ನ ಪುಟ ಸಂಖ್ಯೆ: 18 ಜಿ-04 (1) ಮತ್ತು (2)ರಲ್ಲಿರುವ ಸ್ಕ್ವೇರ್ ಮೀಟರ್ ಅಳತೆಯು ರನ್ನಿಂಗ್ ಮೀಟರ್ ಆಗಬೇಕಾಗಿತ್ತೆಂದು ತಿಳಿಸಿದರು.

ಇದಕ್ಕೆ ಆರ್ಕಿಟೆಕ್ಟ್ ಸಂಸ್ಥೆಯ ಪ್ರತಿನಿಧಿ, ಡಿಐಜಿಪಿ, ಕೆ.ಎಸ್.ಆರ್.ಪಿ., ಮತ್ತು ಟೆಂಡರ್ ಪರಿಶೀಲನಾ ಕಾರ್ಯಾದ್ಯಕ್ಷಕರು ರವರು ಸಹಮತ ವ್ಯಕ್ತಪಡಿಸಿದರು.

3. ಮೆ: ಎಲ್. ದಯಾನಂದ, ಇಂಜಿನಿಯರಿಂಗ್ ಕಂಟ್ರಾಕ್ಟರ್ ಸಂಸ್ಥೆಯ ಪ್ರತಿನಿಧಿ ಇವರು ದಿನಾಂಕ 25-9-2009 ರಂದು ಸಭೆಗೆ ನೀಡಿದ ಪತ್ರದಲ್ಲಿ 1 ರಿಂದ 7 ಅಂಶಗಳ ಬಗ್ಗೆ ವಿವರಣೆ ಬಯಸಿರುತ್ತಾರೆ.

ಇ.ಎಂ.ಡಿ. ಬಗ್ಗೆ: ಟೆಂಡರ್ ದಾಖಲೆಗಳಲ್ಲಿ ಕೇವಲ ಡಿ.ಡಿ.ಯನ್ನು ಮುಂಗಡ ಠೇವಣಿಯಾಗಿ ನೀಡುವಂತೆ ತಿಳಿಸಲಾಗಿದೆ. ಆದರೆ, ಬ್ಯಾಂಕ್ ಗ್ಯಾರಂಟಿಗೂ ಅವಕಾಶವಿರುವುದರಿಂದ, ಬ್ಯಾಂಕ್ ಗ್ಯಾರಂಟಿಗೂ ಅವಕಾಶ ಮಾಡಿಕೊಡುವಂತೆ ಕೋರಿದರು.

ಟೆಂಡರ್‌ನಲ್ಲಿ ಯಶಸ್ವಿಯಾಗದ ಬಿಡ್‌ದಾರರಿಗೆ ತಕ್ಷಣವೇ ಇ.ಎಂ.ಡಿ. ಮೊತ್ತವನ್ನು ಹಿಂತಿರುಗಿಸಲು ಉದ್ದೇಶಿಸಲಾಗಿದೆ. ಬ್ಯಾಂಕ್ ಗ್ಯಾರಂಟಿ ಪಡೆದರೆ ನಿಯಮಾನುಸಾರ ಪತ್ರ ವ್ಯವಹಾರ ಮಾಡುವ ಹಾಗೂ ವಿಳಂಬವಾಗುವ ಸಾಧ್ಯತೆಗಳು ಇರುವುದರಿಂದ, ಡಿ.ಡಿ.

ಮುಖಾಂತರವೇ ಇ.ಎಂ.ಡಿ.ಯನ್ನು ಪಾವತಿಸುವಂತೆ ಸೂಚಿಸಲಾಯಿತು. ಇದಕ್ಕೆ ಸಭೆಯಲ್ಲಿ ಭಾಗವಹಿಸಿದ್ದ ಟೆಂಡರ್‌ದಾರರು ಒಪ್ಪಿಗೆ ಸೂಚಿಸಿದರು.

4. ಅರ್ಹತಾ ಮಾನದಂಡ: ಟೆಂಡರ್ ದಾಖಲೆಗಳಲ್ಲಿ ಒಂದು ಕಡೆ ಕಟ್ಟಡ ನಿರ್ಮಾಣದ ಬಗ್ಗೆ ಎರಡು ವರ್ಷದ ಅನುಭವ ಇರಬೇಕೆಂದು ಮತ್ತೊಂದು ಕಡೆ ಮೂರು ವರ್ಷದ ಅನುಭವವಿರಬೇಕೆಂದು ತಿಳಿಸಲಾಗಿದೆ. ಆದರೆ, ಸ್ಪಷ್ಟವಾಗಿ ಎಷ್ಟು ವರ್ಷ ಅನುಭವ ಹೊಂದಿರಬೇಕೆಂಬ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿದರು.

ಇದಕ್ಕೆ, ಮೂರು ವರ್ಷಗಳ ಅನುಭವ ಹೊಂದಿರಬೇಕೆಂದು ಸ್ಪಷ್ಟೀಕರಣ ನೀಡಲಾಯಿತು.

5. ಟೆಂಡರ್ ದಾಖಲೆಗಳಲ್ಲಿ ಟೆಂಡರ್ ಮೌಲ್ಯದ ಮೊತ್ತ ರೂ.250.00 ಲಕ್ಷಗಳಾಗಿರುತ್ತದೆ. ಆದರೆ, ಶೆಡ್ಯೂಲ್-ಬಿ ನಲ್ಲಿರುವ ವೆಚ್ಚದ ವಿವರಗಳಲ್ಲಿ ರೂ.2,77,73,938-25 ಎಂದು ನಮೂದಿಸಲಾಗಿದ್ದು, ಈ ಎರಡು ಮೊತ್ತದಲ್ಲಿ ಯಾವುದನ್ನು ಪರಿಗಣಿಸಬೇಕೆಂದು ಸ್ಪಷ್ಟೀಕರಿಸುವಂತೆ ಕೋರಿದರು.

ಇದಕ್ಕೆ, ಶೆಡ್ಯೂಲ್-ಬಿ ನಲ್ಲಿರುವ ಮೊತ್ತ ರೂ.2,77,73,938-25ಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ ಸ್ಪಷ್ಟೀಕರಣ ನೀಡಲಾಯಿತು.

6. ಹಾಲಿ ನೀಡಿರುವ ಟೆಂಡರ್ ದಾಖಲೆಗಳಲ್ಲಿ ವಾಲ್ಯೂಂ-2ನ್ನು ನೀಡಿಲ್ಲವೆಂದು, ಇದನ್ನು ಒದಗಿಸುವಂತೆ ಕೋರಿದರು.

ಇದಕ್ಕೆ, ಟೆಂಡರ್ ದಾಖಲೆಯ ಬಗ್ಗೆ ಆರ್ಥಿಕ ಇಲಾಖೆಯು ದಿನಾಂಕ 6-8-2005 ರಂದು ಹೊರಡಿಸಿರುವ ಕೆ.ಡಬ್ಲ್ಯೂ-4ನ ಪ್ರತಿಯನ್ನು ಟೆಂಡರ್ ಅರ್ಜಿ ಪಡೆದಿರುವ ಎಲ್ಲಾ ಟೆಂಡರುದಾರರಿಗೆ ನೀಡಲಾಗುವುದೆಂದು ತಿಳಿಸಲಾಯಿತು.

7. ಟೆಂಡರ್ ದಾಖಲೆಗಳಲ್ಲಿ ಟೆಕ್ನಿಕಲ್ ಬಿಡ್ ದಾಖಲೆಗಳು ಮತ್ತು ಕಮರ್ಷಿಯಲ್ ಬಿಡ್ ದಾಖಲೆಗಳನ್ನು ಪ್ರತ್ಯೇಕವಾಗಿ ನೀಡದೆ ದ್ವಿಪ್ರತಿಯ ಟೆಂಡರ್ ದಾಖಲೆಗಳನ್ನು ನೀಡಲಾಗಿದೆ. ಸದರಿ ದಾಖಲೆಗಳಲ್ಲಿ ಕಮರ್ಷಿಯಲ್ ಬಿಡ್‌ನ ದಾಖಲೆಗಳೂ ಸೇರಿರುತ್ತವೆ. ಇದನ್ನು ಟೆಂಡರ್ ದಾಖಲೆಗಳಿಂದ ಪ್ರತ್ಯೇಕಿಸಿ ಎರಡನೇ ಕವರ್‌ನಲ್ಲಿ ಸಲ್ಲಿಸಬಹುದೇ ಎಂಬ ಬಗ್ಗೆ ಸ್ಪಷ್ಟೀಕರಣ

ನೀಡುವಂತೆ ಕೋರಿದರು. ಹಾಗೂ ಹಾಲಿ ನೀಡಿರುವ ದ್ವಿಪ್ರತಿಯಲ್ಲಿ ಮೂಲ ಪ್ರತಿ ಯಾವುದು ಮತ್ತು ಎರಡನೇ ಪ್ರತಿ ಯಾವುದೆಂದು ನಮೂದಿಸಿ ಕೊಡುವಂತೆ ಕೋರಿದರು.

ಇದಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು ಹಾಗೂ ನೀಡಿರುವ ದ್ವಿಪ್ರತಿಗಳಲ್ಲಿ ಒಂದು ಮೂಲ ಪ್ರತಿಯೆಂದು ಹಾಗೂ ಇನ್ನೊಂದು ದ್ವಿಪ್ರತಿಯೆಂದು ಡಿ.ಐ.ಜಿ.ಪಿ. ರವರು ಸಹಿ ಮಾಡಿ ನೀಡಿರುತ್ತಾರೆ.

೮. ಟೆಂಡರ್ ಮೌಲ್ಯಕ್ಕಿಂತ ಕಡಿಮೆ ದರ ನಮೂದಿಸಿದ ಬಿಡ್‌ದಾರರು ವ್ಯತ್ಯಾಸದ ಮೊತ್ತಕ್ಕೆ ಡಿ.ಡಿ.ಯನ್ನು ಸಲ್ಲಿಸಬೇಕೆ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿದರು.

ಇದಕ್ಕೆ ಸಭೆಯಲ್ಲಿ ಭಾಗವಹಿಸಿದ್ದ ಆರ್ಕಿಟೆಕ್ಟ್ ಸಂಸ್ಥೆಯ ಪ್ರತಿನಿಧಿ ಹಾಗೂ ನಿವೃತ್ತ ಮುಖ್ಯ ಇಂಜಿನಿಯರ್ ರವರು ವ್ಯತ್ಯಾಸದ ಮೊತ್ತಕ್ಕೆ ಡಿ.ಡಿ.ಯನ್ನು ಸಲ್ಲಿಸಲೇಬೇಕೆಂದು ತಿಳಿಸಿದರು.

ಮತ್ತೇನಾದರೂ ಅನುಮಾನಗಳಿದ್ದು, ವಿವರಣೆ ಬೇಕಾದರೆ ಕೇಳಬಹುದೆಂದು ಟೆಂಡರ್‌ದಾರರನ್ನುದ್ದೇಶಿಸಿ ಕೇಳಿದರು. ಅದಕ್ಕೆ ಸಭೆಯಲ್ಲಿದ್ದ ಟೆಂಡರ್‌ದಾರರು ಯಾವುದೇ ವಿವರಣೆ ಕೇಳದಿರುವುದರಿಂದ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sd/

ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್,
ಕೆ.ಎಸ್.ಆರ್.ಪಿ. ಹಾಗೂ ಸದಸ್ಯ ಕಾರ್ಯದರ್ಶಿ,
ಟೆಂಡರ್ ಪರಿಶೀಲನಾ ಸಮಿತಿ, ಬೆಂಗಳೂರು.